

ಭಾಗ್ಯ ಸಿಗದೆ ಅಲ್ಲೇ ಕೊದರಾಡುತ್ತಿವೆ. ದನ ಕರುಗಳನ್ನ ಹೊತ್ತಿ ಮುಂಚೆ ಹೊಲಗಳಿಗೆ ಕಟ್ಟಾಕಿ ಬರಲಾಗಿದೆ. ಅಂತೂ ಹಟ್ಟಿ ಅಂದು ಮಾತ್ರ ತನ್ನ ಮಾಮೂಲಿ ತನವನ್ನು ಬಿಟ್ಟುಕೊಟ್ಟಂತಿದೆ. ಹಟ್ಟಿ ಮತ್ತು ಊರೊಳ್ಳನ್ನು ಬೇರ್ಪಡಿಸುವ ಸಲುವಾಗಿ ಉಂಟಾಗಿರುವ ಸರ್ಕಲ್ ಬಳಿಯ ತಾಯಮ್ಮನ ಹೋಟೆಲ್ ಬಳಿ ಶ್ರೀಗಳಿರುವ ಫ್ಲೆಕ್ಸ್ ಅನ್ನು ಎಳೆದು ಕಟ್ಟಲಾಗಿದೆ. ಅದು ಗಾಳಿಗೆ ಜೋತಾಡುತ್ತಲಿದ್ದು, ಈ ಸಂಧಾನ ಯಾವಾಗ ಬೇಕಾದರೂ ಹರಿದು ಹೋಗುವುದರ ಸೂಚಕದಂತಿದೆ.

ಊರೊಳ್ಳ ಮಂಜೇಗೌಡರಿಗೆ ಈ ಹಟ್ಟಿ ಮೇಲೆ ಹಿಂದಿನಿಂದಲೂ ಒಂದು ಕಣ್ಣು ಇದ್ದೇ ಇತ್ತು. ಈಗ ಎರಡೂ ಕಣ್ಣು ಬೀಳುವಂತಾಗಿತ್ತು. ಕಾರಣ, ತಮ್ಮ ಅಪ್ಪ ಪಂಚೇಗೌಡರ ಕಾಲದಲ್ಲಿ